ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟಲ್‌ಮೆಂಟ್ ಇಲಾಖೆ.

ನಂ. 666. ತಾರೀಖು 12ನೇ ನವೆಂಬರ್ 1885.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಯಿದರಿಂದ ಪ್ರಕಟಿಸಲ್ಪಡುವದೇನಂದರೆ, 1885ನೇ ಇಸವಿ ನವೆಂಬರ್ 1ನೇ ಮರಕ್ಕು೦ನಲ್ಲಿ, ಪ್ರಾರಂಭಿಸುವ ಸರ್ವೇ ಕೆಲಸದ ಕಾಲದಲ್ಲಿ ಇದರಡಿ ನಮೂದಿಸುವ ತಾಲ್ಲೂಕುಗಳಲ್ಲಿ ಮೆಜರಿಂಗ್, ಯಾನೆ ಮೋಜಣಿ, ಕ್ಯಾಸಿಫಿಕೇಷನ್ ಯಾನೇ ಪ್ರತಿಬಂದಿ ಮತ್ತು ಸೆಟಲ್‌ಮೆಂಟ್ ಯಾನೆ ತರಂ ಫೈಸಲ್, ಕೆಲಸಗಳು ನಡಿಸಲ್ಪಡುವವು.

ಡಿಸ್ಟ್ರಿಕ್ಟ್.	ತಾಲ್ಲೂಕು.	ಕೆಲಸ ಪುರು ಆಗತಕ್ಕ ಪುಮಾರ್ ತಾರೀಖು.	ಷರಾ.
	ಮೋಜಣಿಯು.		
ಕೋಲಾರ ..	ಕೋಲಾರ ..	5ನೇ ನವೆಂಬರ್ 1885	
ಮೈಸೂರು ..	ಗುಂಡ್ಲುಪೇಟೆ ..	10ನೇ ಡಿಟೋ	
..	ಮಂಡ್ಯಾ ..	ಡಿಟೋ	
..	ಚಿಕ್ಕದೇವರಾಯಸಾಗರ ನಾಲಾ ..	1ನೇ ಜನವರೀ 1886	ಮಲ್‌ನಾಡ್ ತಾಲ್ಲೂಕುಗಳಲ್ಲಿಲ್ಲರೇ ಕೆಲಸವೂ ಸಹ ನಡಿಯುತ್ತೆ.
	ಪ್ರತಿಬಂದಿಯು.		
ಕೋಲಾರ ..	ಚಿಂತಾಮಣಿ ..	15ನೇ ನವೆಂಬರ್ 1885	
ಮೈಸೂರು ..	ಮೈಸೂರು ..	5ನೇ ನವೆಂಬರ್ 1885	
..	ನಾಗಮಂಗಲ್ ..	ಡಿಟೋ	
	ತರಂ ಫೈಸಲ್.		
ಬೆಂಗಳೂರು ..	ಹೊಸಕೋಟೆ ..	15ನೇ ಏಪ್ರಿಲ್ 1886	
ಮೈಸೂರು ..	ಅತ್ತಿಕುಪ್ಪಾ ..	15ನೇ ಮೊರ್ಚ್ 1886	

ಜೆ. ಪಿ. ಗ್ಯಾಂಟ್,
ಸೂ॥ ರವಿನ್ಯೂ ಸರ್ವೇ ಮತ್ತು ಸೆಟಲ್‌ಮೆಂಟ್.

ಅಂಚೇ ಇಲಾಖೆ.

ತಾರೀಖು 9ನೇ ನವೆಂಬರ್ 1885.

ಇದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಮುಖ್ಯರಾಜ ರಾಜಾನಾಹೆಬ್ ಬಹದೂರವರ ದಿವಾನರವರ ಅಪ್ಪಣೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಹೋಬಳೀ ಅಂಚೇ ಆಫೀಸುಗಳು ಸ್ಥಾಪಿಸಲ್ಪಟ್ಟಿರುತ್ತವೆ:—

ತಾಲ್ಲೂಕು.	ಅಂಚೇ ಆಫೀಸ್ ಸ್ಥಾಪಿಸಲ್ಪಟ್ಟ ಸ್ಥಳಗಳ ಹೆಸರು.
ತುಮಕೂರು	ತೊಟ್ಲಗೆರೆ
ದೊಡ್ಡಬಳ್ಳಾಪುರ	ಮೇಳೇಕೋಟೆ
ಚಿಕ್ಕಮಗಳೂರು	ಅತ್ತೀಗುಂಡಿ



ತಾರೀಖು 15ನೇ ನವೆಂಬರ್ 1885.

ನಂ. A 17.—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ಸರ್‌ಕ್ಯೂಟ್ ಮೊಕ್ತಾಮಿನಲ್ಲಿ ಪಾವತೀಬಗ್ಯೆ ರವಾನಿಸಲ್ಪಡುವ ದರೋಬಸ್ತು ಲೇಟರುಗಳು ವ ಪಾರಸೆಲ್‌ಗಳ ಮೇಲೆ "ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ಕ್ಯಾಂಪಿಗೆ" ಯಂಬದಾಗಿ ಮಾತ್ರ ಮೇಲ್‌ವಿಳಾಸ ಬರಿಯಬೇಕೇ ಹೊರ್ತು, ಫಲಾನೆ ಅಂಚೆಗೆ ಯಂಬದಾಗಿ ಬರಿಯತಕ್ಕ ಅವಶ್ಯಕವಿಲ್ಲವು.

ಬಿ. ಮರಿಗಂಗಯ್ಯ,
ಅಂಚೇ ಬಕ್ಷಿ.

ಬೆಂಗಳೂರು ಡಿಸ್ಟ್ರಿಕ್ಟ್.

ಇನ್ಸ್ಟಿಹಾರ್‌ನಾಮೆ.

ತಾರೀಖು 13ನೇ ನವೆಂಬರ್ 1885.

ಇದರಿಂದ ತಿಳಿಸುವದೇನಂದರೆ, ಬೆಂಗಳೂರು ಸೆಂಟ್ರಲ್ ಜೈಲ್‌ನಲ್ಲಿಯೂ ಡಿಸ್ಟ್ರಿಕ್ಟ್ ಲಾಕಪ್ಪಿನಲ್ಲಿಯೂ ಖೈದ ಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಯೆ ಸ್ಯ 1886ನೇ ಇಸವಿ ಜನವರೀ ಗುರ್ಯೇ ತಾರೀಖು ಮೊದಲು 1886ನೇ ಡಿಸಂಬರ್ 31ನೇ ತಾರೀಖುವರಿಗೆ ಎರಡು ದಿನಗಳೂ ಕೇರಿ ಬೇಕಾದ ಆಹಾರ ವಗೈರೇ ದರೋಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಬಂದ್ ಮಾಡಲ್ಪಟ್ಟ ದರಖಾಸ್ತುಗಳನ್ನು—ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರವರು, ಸ್ಯ 1885ನೇ ಇಸವಿ ಡಿಸಂಬರ್ 10ನೇ ತಾರೀಖುವರಿಗೆ ತೆಗದುಕೊಳ್ಳುವರು.

2. ಸದರೀ ತಾರೀಖು ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡುವದಿಲ್ಲವು.

3. "ಸೆಂಟ್ರಲ್ ಜೈಲ್ ಮತ್ತು ಡಿಸ್ಟ್ರಿಕ್ಟ್ ಲಾಕಪ್ಪಿಗೆ ಆಹಾರ ಪದಾರ್ಥಗಳ ಸರಬರಾಯಿ ಬಗ್ಯೆ ದರಖಾಸ್ತುಗಳು" ಯೆಂಬದಾಗಿ ದರಖಾಸ್ತುಗಳ ಮೇಲೆ ಬರೆದು ಕಳುಹಿಸತಕ್ಕದ್ದು.

4. 500 ರೂಪಾಯಿಗಳು ನಗದಾಗಿ ಅಥವಾ ಕರ್ನಾಟೀ ನೋಟುಗಳ ಮೂಲಕ ಡಿಪಾಜಿಟ್‌ನೀ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಸೆಂಟ್ರಲ್ ಜೈಲ್ ಆಫೀಸಿನಲ್ಲಿ, ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರ ರೂಬರೂ, ಮೇಲ್ಕಂಡ ತಾರೀಖಿನೊಳಗೆ ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರವರಿಂದ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ತರಗತಿಯ ಪ್ರತಿ ಖೈದಿಗೂ ದಿನ ಒಂದಕ್ಕೆ ಆಗತಕ್ಕ ದರವು ನಮೂದಿಸಲ್ಪಡತಕ್ಕದ್ದು.

1	ನೇಟಿವ್ ಕೂಲಿಯವರಾದ	ಖೈದಿಗಳು	A ಕ್ಲಾಸ್
2	ಡಿಟ್ಟೋ	ಡಿಟ್ಟೋ	B ,,
3	ಡಿಟ್ಟೋ	ಡಿಟ್ಟೋ ಅಲ್ಲವಾಯಿದೆ ಯವರು	C ಕ್ಲಾಸ್
4	ನೇಟಿವ್ ಕೂಲೀ ಮಾಡದ್ದಕ್ಕೆ	ಂಗಸರು, ವಿಚಾರಣೆಯಲ್ಲಿ ಇರತಕ್ಕವರು,	D ಕ್ಲಾಸ್
5	ಹುಡುಗರಾದ ಖೈದೀರು		E ,,
6	ಯೂರೋಪಿಯನ್ನರು	ಈಸ್ಟ್ ಇಂ	ಗಳು